ಏನಾದರೂ ಕೊಟ್ಟಿದ್ದೀರಾ ? 1977ರ ಪ್ರಿವೆನ್‌ಷನ್ ಆಫ್ ಅಂಡರ್-ವ್ಯಾಲ್ಯುಯೇಷನ್ ಆರ್ಡರ್ ಪ್ರಕಾರ ತಾವೇನಾದರು ಹೆಚ್ಚುವರಿ ಸ್ಟ್ಯಾಂಪ್ ಶುಲ್ಕ ತೆಗೆದುಕೊಂಡಿದ್ದರೆ ಅದನ್ನು ಸಂಬಂಧಪಟ್ಟ ಸೊಸೈಟಿಗಳವರಿಗೆ ವಾಪಸ್ ಕೊಡಲು ವಿಚಾರಿಸಿ ಮಾಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.--ಮೊದಲು ಈ ಸವಲತ್ತು 1969 ರಿಂದ ಇತ್ತು, 1-4-82 ರಲ್ಲಿ ಈ ಸವಲತ್ತುಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು. ಆನಂತರ ಕರಿಪ್ಲೆಂಟ್ಸ್ ಬಂದನಂತರ 22-2-84 ರಲ್ಲಿ ಪುನ: ಈ ಸವಲತ್ತುಗಳನ್ನು ಕೊಡಲಾಗಿದೆ.

ರಾಯಚೂರು ನಗರದಲ್ಲಿ ಪ್ರಾದೇಶಿಕ ಕೊಳಚೆ ನಿರ್ಮೂಲನ ಮಂಡಲಿಯ ಸ್ಥಾಪನೆ

327 (834) ಶ್ರೀ ಸಂಗಮೇಶ್ವರ ಸರದಾರ (ರಾಯಚೂರು).--ಮಾನ್ಯ. ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಯಚೂರು ನಗರದಲ್ಲಿ ಪ್ರಾದೇಶಿಕ ಕೊಳಚೆ ನಿರ್ಮೂಲನ ಮಂಡಳಿಯನ್ನು ಪ್ರಾರಂಭಿಸಲು ಸರ್ಕಾರದವರು ಒಪ್ಪಿರುವುದು ನಿಜವೇ ;

ಆ) ಈ ಮಂಡಳಿಯನ್ನು ಪ್ರಾರಂಭಿಸದಿರುವುದರಿಂದಾಗಿ ರಾಯಚೂರು ನಗರದಲ್ಲಿ ದಿನೇ ದಿನೇ ಕೊಳಚೆ ಪ್ರದೇಶಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಮೇಲಿನ ಕಛೇರಿಯನ್ನು ಕೂಡಲೇ ಪ್ರಾರಂಭಿಸುವ ವಿಚಾರ ಸರ್ಕಾರದಲ್ಲಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು).--ಅ) ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ಶ್ರೀ ಎಂ. ಚಂದ್ರಶೇಖರ್.--ಮಾನ್ಯ ಅಧ್ಯಕ್ಷರೇ, ಆ ಪ್ರಶ್ನೆಯಲ್ಲಿ ರಾಯಚೂರು ನಗರದಲ್ಲಿ ಪ್ರಾದೇಶಿಕ ಕೊಳಚೆ ನಿರ್ಮೂಲನ ಮಂಡಲಿಯನ್ನು ಪ್ರಾರಂಭಿಸಲು ಸರಕಾರದವರು ಒಪ್ಪಿರುವುದು ನಿಜವೇ ಎಂದು ಕೇಳಿರುತ್ತಾರೆ, ಮತ್ತೆ ಇ ಪ್ರಶ್ನೆಯಲ್ಲಿ ಕಛೇರಿಯನ್ನು ಕೂಡಲೆ ಪ್ರಾರಂಭಿಸುವ ವಿಚಾರ ಸರಕಾರದವರಲ್ಲಿದೆಯೇ ಎಂದು ಕೇಳಿರುತ್ತಾರೆ, ಮಂಡಲಿಗೆ ಬದಲಾಗಿ ಕಚೇರಿಯೆಂದು ತಿದ್ದುಪಡಿಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಸಂಗಮೇಶ್ವರ ಸರದಾರ್.--ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ್ಳು ರಾಯಚೂರು ನಗರವನ್ನು ಕೊಳಚೆ ಪ್ರದೇಶಗಳಿಂದ ಕೂಡಿದಂಥ ನಗರವೆಂದು ಡಿಕ್ಲೇರ್ ಮಾಡಿರುತ್ತಾರೆ. ರಾಯಚೂರು ನಗರವು ಬೆಂಗಳೂರನ್ನು ಬಿಟ್ಟರೆ ಎರಡನೆಯ ಮಹಾ ನಗರವಾಗತಕ್ಕಂಥ ಪರಿಸ್ಥಿತಿಯಲ್ಲಿ ಇದೆ. ಆದ್ದರಿಂದ ಇಲ್ಲಿ ಒಂದು ರೀಜನಲ್ ಆಫೀಸನ್ನು ತೆಗೆಯಬೇಕೆಂದೂ ಕೂಡ ಒಪ್ಪಿಕೊಂಡಿರುತ್ತಾರೆ. ಹಾಗೆಯೇ ನನ್ನ ಮೂರನೆಯ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಈ ಪ್ರಶ್ನೆ ಉದ್ಭವಿಸುದಿಲ್ಲವೆಂದು ಹೇಳಿರುವುದರಿಂದ ನನಗೆ ಬಹಳ ವ್ಯಥೆಯಾಗುತ್ತಿದೆ. ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ಈ ರಾಯಚೂರು ಮಹಾ ನಗರದಲ್ಲಿ 28 ಕೊಳಚೆ ಪ್ರದೇಶಗಳು ಇರುವುದರಿಂದ, ಬೆಂಗಳೂರಿನ ನಗರದಂತೆ ಇಲ್ಲಿಯೂ ಕೂಡ ಒಂದು ರೀಜನಲ್ ಆಫೀಸನ್ನು ತೆಗೆಯಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ ?

ಶ್ರೀ ಎಂ. ಚಂದ್ರಶೇಖರ್.--ನಾನು ಪ್ರಶ್ನೆಯಲ್ಲಿ ಉತ್ತರವನ್ನು ಕೊಟ್ಟಿರುವಂತೆ ಇಲ್ಲಿ ಒಂದು ವಿಭಾಗೀಯ ಅಸಿಸ್ಟೆಂಟ್ ಇಂಜಿನೀಯರ್ ಆಫೀಸನ್ನು ಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೇನೆ. ಈ ನಗರಕ್ಕೆ ಕಛೇರಿಯ ಅವಶ್ಯಕತೆ ಇದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಿ, ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ.--ರಾಯಚೂರನ್ನು ಕೊಳಚೇ ಪ್ರದೇಶಗಳಿಂದ ಕೂಡಿದ ನಗರವೆಂದಾದರೂ ಘೋಷಣೆ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.--ಖಾಸಗಿಯಾಗಿ ಮಾತನಾಡುವಾಗ ಈ ವಿಚಾರ ಬಂದಿರುತ್ತದೆಂದು ಹೇಳಬೇಕಾಗಿದೆ.

ನಗರಾಭಿವೃದ್ಧಿ ಮಂಡಳಿಗೆ ಅನುದಾನ

328 (554) ಶ್ರೀ ಬಿ. ಹೆಚ್. ಯಂಕನಾಯಕ (ಹರಪನ ಹಳ್ಳಿ) ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?